

ಅಪೂರ್ವ ಕಾಸರವಳ್ಳಿ
ನಿರ್ದೇಶನದ 'ನಿರುತ್ತರ'
ಪ್ರತಿಭಾವಂತರ
ಸಂಗಮದಿಂದಾಗಿ
ಚಿತ್ರರಸಿಕರ ಗಮನ
ಸೆಳೆದಿರುವ ಸಿನಿಮಾ.

# ನಾಲ್ಕೂ ನಿಟ್ಟಿನಿಂದ.....

'ನಿರುತ್ತರ' – ಹಾಗೆಂದರೆ ಏನು? ಇದು ಬದುಕಿನ ಸಂಘರ್ಷದ ಕಥನ. ಜೀವನದ ಬೇರೆ ಬೇರೆ ಮುಖಗಳ ಅನಾವರಣದ ಪ್ರಯತ್ನ' ಎಂದರು ಅಪೂರ್ವ ಕಾಸರವಳ್ಳಿ. 'ನಿರುತ್ತರ' ಅಪೂರ್ವ ಅವರ ನಿರ್ದೇಶನದ ಮೊದಲ ಸಿನಿಮಾ. ಚೊಚ್ಚಲ ನಿರ್ದೇಶನ ಎನ್ನುವುದು ತನ್ನೊಳಗಿನ ಕನಸುಗಳನ್ನೆಲ್ಲ ಒಮ್ಮೆಗೆ ಹೊರಚೆಲ್ಲಿ ಹಗುರಾಗುವ ಕ್ರಿಯೆ ಹಾಗೂ ತನ್ನ ಪ್ರಯತ್ನಕ್ಕೆ ಚಿತ್ರರಸಿಕರು ಹೇಗೆ ಪ್ರತಿಕ್ರಿಯಿಸುತ್ತಾರೆ ಎಂದು ಕುತೂಹಲ ಹಾಗೂ ಆತಂಕದಿಂದ ಎದುರು ನೋಡುವ ಸಂದರ್ಭ. ಈ ಪುಲಕ ಹಾಗೂ ಆತಂಕ ಎರಡನ್ನೂ ಅನುಭವಿಸುತ್ತಿರುವ ಅಪೂರ್ವ, ತಮ್ಮ ಚೊಚ್ಚಲ ಪ್ರಯತ್ನ ಪ್ರೇಕ್ಷಕರಿಗೆ ಇಷ್ಟವಾಗುವ ಬಗ್ಗೆ ಆತ್ಮವಿಶ್ವಾಸದಿಂದ ಇದ್ದಾರೆ.

ಇದು ಯುವ ತಲೆಮಾರಿನ ತವಕತಲ್ಲಣಗಳ ವಿಶ್ಲೇಷಣೆಯ ಪ್ರಯತ್ನವಾ ಎನ್ನುವ ಪ್ರಶ್ನೆಗೆ – 'ಇಲ್ಲ' ಎನ್ನುತ್ತಲೇ ತಮ್ಮ ಚಿತ್ರದ ಪ್ರಮುಖ ಪಾತ್ರಗಳ ಚೌಕಟ್ಟನ್ನು ಎದುರಿಗಿಟ್ಟರು. ರಾಹುಲ್ ಬೋಸ್, ಕಿರಣ್, ಐಂದ್ರಿತಾ ಹಾಗೂ ಭಾವನಾ ಚಿತ್ರದ ಪ್ರಮುಖ ಪಾತ್ರಗಳು. ನಾಲ್ಕು ದಿಕ್ಕುಗಳಂತೆ ಕಾಣಿಸುವ ಈ ವ್ಯಕ್ತಿತ್ವಗಳು ಯಾವುದೋ ಒಂದು ಬಿಂದುವಿನಲ್ಲಿ ಸಂಧಿಸುತ್ತಾರೆ. ರಾಹುಲ್ ಕಾರ್ಪೊರೇಟ್ ಕಂಪೆನಿಯಲ್ಲಿ ಇರುವ ವ್ಯಕ್ತಿ. ಕಿರಣ್ ರಾಕ್ ಸಂಗೀತಗಾರ. ಬದುಕಿನ ಬಗ್ಗೆ ಅಷ್ಟೇನೂ ಸ್ಪಷ್ಟ ನಿಲುವುಗಳು ಆತನಿಗಿಲ್ಲ. ಈ ಸಂಗೀತಗಾರನಿಗೆ ತದ್ವಿರುದ್ಧ ಗುಣವುಳ್ಳ ವ್ಯಕ್ತಿತ್ವದ ತರುಣಿ ಐಂದ್ರಿತಾ. ಡಾಕ್ಯುಮೆಂಟರಿ ಫಿಲ್ಮ್ ಮೇಕರ್ ಆಗಬೇಕು ಎನ್ನುವುದು ಆಕೆಯ ಕನಸು. ಇನ್ನು ಭಾವನಾ ಅವರದು ಗೃಹಿಣಿಯ ಪಾತ್ರ. ಮದುವೆಯ ನಂತರ ಹೆಣ್ಣುಮಕ್ಕಳ ಆದ್ಯತೆಗಳು ಬದಲಾಗುತ್ತವೆ. ತೊಳಲಾಟದ ಹೆಣ್ಣುಮಗಳ ಪಾತ್ರ ಅವರದು. ಹೀಗೆ ಬೇರೆಯದೇ ರೀತಿಯ ಜಗತ್ತುಗಳಲ್ಲಿ ಬದುಕುವ, ತಮ್ಮದೇ ಆದ ಸವಾಲುಗಳಿಗೆ ಮುಖಾಮುಖಿ ಆಗಿರುವ ನಾಲ್ವರು 'ನಿರುತ್ತರ'ದ ನಾಲ್ಕು ಸ್ತಂಭಗಳು!

ಪಾತ್ರಗಳನ್ನು ವಿವರಿಸುವ ಮೂಲಕವೇ ಅಪೂರ್ವ ತಮ್ಮ ಚಿತ್ರದ ಸಾಧ್ಯತೆಗಳನ್ನು ಸೂಚಿಸಿದರು. ಹಾಂ, ಈ ಕಥನ ನಡೆಯುವುದು ನಗರದ ಪರಿಸರದಲ್ಲಿ. ಹಾಗಾಗಿ, ತಮ್ಮ ಚಿತ್ರವನ್ನು 'ಅರ್ಬನ್ ಡ್ರಾಮಾ' ಎಂದವರು ಕರೆದುಕೊಳ್ಳುತ್ತಾರೆ.

'ನಿರುತ್ತರ' ಯಾವ ಬಗೆಯ ಸಿನಿಮಾ ಎಂದು ಮತ್ತೂ ಕೆದಕಿ ಕೇಳಿದರೆ– 'ಸಿನಿಮಾದ ಪಾತ್ರಗಳೊಂದಿಗೆ ಪ್ರೇಕ್ಷಕರು ತಮ್ಮನ್ನು ತಾವು ಗುರ್ತಿಸಿಕೊಳ್ಳುವ ಬಗೆಯ ಸಿನಿಮಾ ಇದು' ಎನ್ನುತ್ತಾರೆ.

ಯುವ ಕಥೆಗಾರ ವಿಕ್ರಂ ಹತ್ವಾರ್ 'ನಿರುತ್ತರ'ದ ಕಥೆಗಾರ. ಸಾಮಾನ್ಯವಾಗಿ ಯುವ ನಿರ್ದೇಶಕರು ತಮ್ಮ ಸಿನಿಮಾಗಳಿಗೆ ತಮ್ಮದೇ ಕಥೆಗಳನ್ನು ಆರಿಸಿಕೊಳ್ಳುವುದು ಗಾಂಧಿನಗರದಲ್ಲಿ ಚಾಲ್ತಿಯಲ್ಲಿರುವ ಟ್ರೆಂಡ್. ಆದರೆ, ಅಪೂರ್ವ ಮತ್ತೊಬ್ಬ ಕಥೆಗಾರನ ಕಥೆಯನ್ನು ಚಿತ್ರಕ್ಕೆ ಅಳವಡಿಸಿದ್ದಾರೆ. ಸಿನಿಮಾ ಎನ್ನುವುದೇ ಸಾಮೂಹಿಕ ಪ್ರಯತ್ನವಲ್ಲವೇ? ಅಪೂರ್ವ ಕೂಡ ಇದೇ ಮಾತನ್ನು ಹೇಳುತ್ತಾರೆ. 'ನನ್ನ ಬಳಿ ಕೂಡ ಒಂದಷ್ಟು ಕಥೆಗಳಿವೆ. ಆದರೆ, ಚರ್ಚೆಯ ಸಂದರ್ಭದಲ್ಲಿ ವಿಕ್ರಂ ಅವರು ಹೇಳಿದ ಒಂದು ಎಳೆ ಎಲ್ಲರಿಗೂ ಇಷ್ಟವಾಯಿತು. ಹಾಗಾಗಿ ಅದನ್ನೇ ನಾವೆಲ್ಲ ಬೆಳೆಸಿದೆವು' ಎನ್ನುತ್ತಾರೆ.

'ಸಾಮೂಹಿಕ ಪ್ರಯತ್ನ' ಎನ್ನುವ ವಿಶೇಷಣದ ಸಂದರ್ಭದಲ್ಲಿ ಭಾವನಾ ಅವರ ಬಗ್ಗೆ ಹೇಳಬೇಕು. ಅವರು ಚಿತ್ರದ ನಿರ್ಮಾಪಕಿ. ಇತರ ನಿರ್ಮಾಪಕರಂತೆ ಬಂಡವಾಳ ಹೂಡಿಕೆಗಷ್ಟೇ ಸೀಮಿತವಾಗದೆ, ಚಿತ್ರದ ಸೃಜನಶೀಲ ಪ್ರಕ್ರಿಯೆಯಲ್ಲೂ ಅವರ ಸಕ್ರಿಯ ಪಾತ್ರವಿದೆ. 'ಮಾದರಿ ನಿರ್ಮಾಪಕ'ರ ಇಂಥ ಪಾತ್ರ ಕೂಡ ಕನ್ನಡ ಚಿತ್ರರಂಗದಲ್ಲಿ ಅಪರೂಪ.

ಕನ್ನಡದಲ್ಲೀಗ ಯುವ ಪ್ರತಿಭೆಗಳ ಕಲರವ. ಈ ಸಾಲಿಗೆ 'ನಿರುತ್ತರ' ಹಾಗೂ ಅಪೂರ್ವ ಸೇರ್ಪಡೆಯಾಗುವ ನಿರೀಕ್ಷೆ ಚಿತ್ರರಸಿಕರದು.

■ ರಘು